

# ವಿನಾಶದ ಕ್ರೂರಮುಖ ಮತ್ತು ಜೀವಕಳೆಯ ಸುಖ!

ಕೇವಲ ಒಂದೂವರೆ ನಿಮಿಷದಲ್ಲಿ ಪ್ರಕೃತಿಯ ಜೀವನ್ಮುಖಿ ಗುಣ ಮತ್ತು ಮನುಷ್ಯನ ವಿನಾಶಕಾರಿ ಅವಗುಣ ಎರಡನ್ನೂ ಮುಖಾಮುಖಿಯಾಗಿಸುವ ಆ್ಯನಿಮೇಟೆಡ್ ಕಿರುಚಿತ್ರವಿದು.

■ ಗೌರಿ

ಬಹುಜೀವಗಳಿಗೆ ಅನುವು ಮಾಡಿಕೊಡುವ ಹಾಗೆ ತನ್ನ ವ್ಯವಸ್ಥೆಯನ್ನು ರೂಪಿಸಿಕೊಂಡಿದ್ದ ನಿಸರ್ಗದ ಮೇಲೆ ಮನುಷ್ಯನ ದಾಳಿ ಮಾಡಿದ ಪರಿಣಾಮ ಭೀಕರವಾದದ್ದು. ತನ್ನ ದುರಾಸೆಗೆ, ಭೋಗಕ್ಕೆ ಹಂತಹಂತವಾಗಿ ಪ್ರಕೃತಿಯನ್ನು ನಾಶಗೊಳಿಸುತ್ತ ತನ್ನ ನೆಲೆಯನ್ನು ಸ್ಥಾಪಿಸುತ್ತ ಬಂದ ಮಾನವನ ಮೇಲಾಟ ಈಗ ಪರಾಕಾಷ್ಠೆ ತಲುಪಿದೆ. ಇದರ ಪರಿಣಾಮವಾಗಿಯೇ ಉಸಿರಾಡುವ ಗಾಳಿ, ಅನ್ನ ಬೆಳೆಯುವ ನೆಲ, ಕುಡಿಯುವ ನೀರು, ಎಲ್ಲವೂ ಕಲುಷಿತಗೊಂಡಿರುವ ವಿಷಮ ಪರಿಸ್ಥಿತಿಯಲ್ಲಿ ನಾವು ಬದುಕುತ್ತಿದ್ದೇವೆ.

ಚರ್ಚೆಗೆ ಇಳಿದರೆ ಇದು ಬಹುದೊಡ್ಡ ವಿಷಯ. ಮನುಷ್ಯನ ವಿನಾಶಕಾರಿ ಮನೋವೃತ್ತಿ ಮತ್ತು ನಿಸರ್ಗದ ತಾಯಿಗುಣ ಇವೆರಡರ ಮುಖಾಮುಖಿ ಆಗಿಸುವುದೆಂದರೆ ಜೀವ ಮತ್ತು ಸಾವಿನ ಆಯ್ಕೆಗಳನ್ನು ಎದುರಿಗಿಟ್ಟಂತೆ. ಇಂಥದ್ದೊಂದು ಮುಖಾಮುಖಿಯನ್ನು ಒಂದೂವರೆ ನಿಮಿಷದಲ್ಲಿಯೇ ಮಾಡಿತೋರಿಸುವ ಕಿರುಚಿತ್ರ 'ಜಿಸೆಲ್ಲೆ'.

ಕೆಲವು ಕಥೆಗಳನ್ನು ಇಡಿಯಾಗಿ ಹೇಳಬೇಕಾಗುವುದಿಲ್ಲ. ಅದು ಎಲ್ಲರಿಗೂ ಗೊತ್ತಿರುವ, ಯಾರು ಬೇಕಾದರೂ ಊಹಿಸಿಕೊಳ್ಳುವ ಕಥೆಯಾಗಿರುತ್ತದೆ. ದೃಶ್ಯಮಾಧ್ಯಮದಲ್ಲಿ ಹೀಗೆ ಗೊತ್ತಿರುವುದನ್ನು ಹೇಳದೆಯೇ, ಪ್ರೇಕ್ಷಕನ ಮನಸಲ್ಲಿ ಬೆಳೆಯಲು ಬಿಟ್ಟು ಕಥೆಯನ್ನು ಮುಂದುವರಿಸಿಕೊಂಡು ಹೋಗುವುದು ಒಂದು ನಿರೂಪಣಾ ತಂತ್ರ. ಆ ತಂತ್ರವನ್ನೇ ಜಿಸೆಲ್ಲೆ ಕಿರುಚಿತ್ರದಲ್ಲಿ ಬಳಸಿಕೊಳ್ಳಲಾಗಿದೆ.

ಅದೊಂದು ಕನ್ನಡಿಯಂಥ ಹೊಳಪಿನ ಒಂದು ಜಾಗ. ಅಲ್ಲಿರುವುದು ಮಣ್ಣಲ್ಲ, ಗ್ರಾನೈಟ್ ಶಿಲೆಯಿರಬೇಕು ಎನ್ನಿಸುವಷ್ಟು ಫಳಫಳಿಸುತ್ತಿದೆ ಆ ನೆಲ. ಕಣ್ಣು ಹಾಯಿಸಿದಷ್ಟೂ ದೂರ ಅದೇ ಕಾಣಿಸುತ್ತಿದೆಯೇ ಹೊರತು ಒಂದೇ ಒಂದು ಜೀವದ, ಜೀವಂತಿಕೆಯ ಸುಳಿವೂ ಅಲ್ಲಿಲ್ಲ. ನೀರ ಪಸೆ ಆ ಹೊಳಪನ್ನು ಇನ್ನಷ್ಟು ಹೆಚ್ಚಿಸಿದೆ. ಅಲ್ಲಿ ಬೃಹದಾಕಾರದ ಒಂದು ವಿಮಾನ ನಿಂತಿದೆ. ಉದ್ದುದ್ದಕ್ಕೆ ರೆಕ್ಕೆ ಚಾಚಿಕೊಂಡಿರುವ ಆ ವಿಮಾನದಿಂದ ಒಬ್ಬ ಯಂತ್ರಮಾನವ ನಡೆದುಬರುತ್ತಾನೆ. ಅವನು ಯಂತ್ರಮಾನವನೋ ಅಥವಾ ನಿಜಮಾನವನೇ ಯಂತ್ರದ ರೂಪುತಾಳಿದ್ದಾನೋ ಹೇಳುವುದು ಕಷ್ಟ. ಅವನಿಂದ ತುಸು ದೂರದಲ್ಲಿ ಒಂದಿಷ್ಟು ಜಾಗದಲ್ಲಿ ಒಂದು ಸಣ್ಣ ಮಣ್ಣಿನ ರಾಶಿ ಇದೆ. ಅದರ ಪಕ್ಕ ಒಂದೆರಡು ಕಲ್ಲುಗಳೂ ಇವೆ. ಆ ರಾಶಿಯಿಂದ ಮತ್ತೊಂದು ಯಂತ್ರಮಾನವನ ಮುಖವಾಡ ಮಾತ್ರ ಕಾಣಿಸುತ್ತಿದೆ. ಬಹುಶಃ ಅದು ಸತ್ತುಹೋದ ಯಂತ್ರಮಾನವನ ಸಮಾಧಿಯಿರಬೇಕು.



ಹೆಸರು: ಜಿಸೆಲ್ಲೆ
ನಿರ್ದೇಶನ: ಇಮ್ಯಾನುವೆಲ್ ಶಿಯು
ಸಂಗೀತ: ವೈಖಲ್ ವಿಗ್ನೋಲಾ
ಧ್ವನಿ ವಿನ್ಯಾಸ: ಜೂಲಿಯನ್ ಲಿಯಾವೊ
ಆ್ಯನಿಮೇಷನ್: ಕೆಲ್ವಿನ್ ಚೂ

ನಡೆದುಬಂದ ಯಂತ್ರಮಾನವ ಆ ಮಣ್ಣುರಾಶಿಯನ್ನು ಕೆದರಿ ಅಲ್ಲಿ ಒಂದು ಸಣ್ಣ ಸಸಿಯನ್ನು ನೆಡುತ್ತಾನೆ. ನಂತರ ಅಲ್ಲಿಂದ ಹೊರಟುಹೋಗುತ್ತಾನೆ.

'ಕೆಲವು ವರ್ಷಗಳ ನಂತರ...' ಎಂದು ಶುರುವಾಗುವ ಮುಂದಿನ ದೃಶ್ಯ ಮೊದಲಿನ ಭಾಗಕ್ಕೆ ಪೂರ್ತಿ ವಿರುದ್ಧವಾದದ್ದು. ಮೊದಲಿನ ದೃಶ್ಯದಲ್ಲಿ ಮಣ್ಣರಾಶಿಯ ಮೇಲೆ ಬಿದ್ದಿದ್ದ ಯಂತ್ರಮಾನವನ ಮುಖವಾಡ ಅಲ್ಲಿಯೇ ತುಸು ಮಾಸಲಾಗಿ ಬಿದ್ದುಕೊಂಡಿದೆ. ಅದರ ಪಕ್ಕದಲ್ಲಿ ನೆಟ್ಟಿದ್ದ ಸಸಿ ಈಗ ಬೆಳೆದು ದೊಡ್ಡದಾಗಿದೆ. ಅದರ ಬುಡದಿಂದ ನೀರಿನ ತೊರೆಯೊಂದು ಜುಳುಜುಳು ಹರಿಯುತ್ತಿದೆ. ನೂರಾರು ಹಕ್ಕಿಗಳು ಆ ಮರದ ಸುತ್ತಲೆಲ್ಲ ಹಾರಾಡುತ್ತ ಸಂಭ್ರಮಿಸುತ್ತಿವೆ. ದೂರ ದಿಗಂತದಲ್ಲಿ ಸೂರ್ಯನೂ ಈ ದೃಶ್ಯವನ್ನು ಕಂಡು ನೀರಮೇಲಿನ ಪ್ರತಿಬಿಂಬದ ಮೂಲಕವೇ ನಕ್ಕಿದ್ದಾನೆ.

ಒಂದು ಜೀವ ಹಲವಾಗುವ, ಹಲವು ಜೀವಗಳ ಕಲರವದಿಂದ ಚೈತನ್ಯ ಅರಳುವ ವಿಸ್ಮಯ ನಡೆಯುವುದು ಪ್ರಕೃತಿಯಲ್ಲಿಯೇ ಅಲ್ಲವೇ? ಬರಡಾಗಿರುವ ನೆಲಕ್ಕೆ ಜೀವಕಳೆ ತುಂಬಲು ಒಂದು ಸಣ್ಣ ಸಸ್ಯ ಸಾಕು. ಆದರೆ ಜಗತ್ತನ್ನೇ ನಿಯಂತ್ರಿಸಹೊರಡುತ್ತಿರುವ ಮನುಷ್ಯ ಮಾತ್ರ ಜೀವನಾಶಮಾಡಿ ಪ್ರಪಂಚವನ್ನು ಬರಡುಮಾಡಹೊರಟಿದ್ದಾನೆ. ಈ ಕಾಣ್ಕೆಯನ್ನು ಎರಡು ದೃಶ್ಯಗಳ ಮುಖಾಮುಖಿಯ ಮೂಲಕವೇ ಈ ಆ್ಯನಿಮೇಟೆಡ್ ಕಿರುಚಿತ್ರ ನಮಗೆ ದಾಟಿಸುತ್ತದೆ.

ಈ ಕಿರುಚಿತ್ರ ವೀಕ್ಷಣೆಗೆ https://bit.ly/3zQebwG ಕೊಂಡಿ/ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ.